





ಆದರೆ ಮೈಕ್ರೊ ಆ್ಯಂಟಿಕ್ ಆಭರಣಗಳು ಇದನ್ನು ಮೀರಿದ ಚಿತ್ರಣದೊಂದಿಗೆ ಸೊಗಸಾಗಿ ಮೂಡಿ ಬಂದಿದೆ. ಮೈಕ್ರೊ ಎಂದರೆ ಸೂಕ್ಷ್ಮದಲ್ಲಿ ಅತೀ ಸೂಕ್ಷ್ಮ. ಮೈಕ್ರೊ ಆಭರಣಗಳಲ್ಲೂ ಚಿತ್ರಣದ ವಿನ್ಯಾಸದಲ್ಲಿ ಮೊದಲಿನ ಆ್ಯಂಟಿಕ್ ವಿನ್ಯಾಸಕ್ಕಿಂತಲೂ ಬಹಳ ಅದ್ಭುತವಾಗಿ ಮೂಡಿ ಬಂದದ್ದು ಮೈಕ್ರೊ ಆ್ಯಂಟಿಕ್‌ನ ವಿಶೇಷತೆ.

ಲಕ್ಷ್ಮಿ ಗಣಪತಿ, ರಾಮ ಪರಿವಾರ ಇಂತಹ ಮೂರ್ತಿಗಳನ್ನು ಸಂಪೂರ್ಣವಾಗಿ ಅದೂ ಕೇವಲ 4ರಿಂದ 5 ಮಿಮೀ ಅಳತೆಯಲ್ಲಿ ಮೂರ್ತಿ ಕೇವಲ 3 ಗ್ರಾಂನಲ್ಲೂ ಲಭ್ಯವಿದೆ. ಮಹಿಳೆಯರಿಗೆ ಸಾಮಾನ್ಯವಾಗಿ ಲಕ್ಷ್ಮಿ ಚಿತ್ರಣವನ್ನು ಹೊಂದಿದ ಆಭರಣ ಬಲು ಪ್ರಿಯ. ಏನೋ ಭರವಸೆ. ಲಕ್ಷ್ಮೀ ನಮ್ಮನ್ನು ಹರಸುತ್ತಾಳೆ ಅನ್ನೋ ನಂಬಿಕೆ.

## ಲಕ್ಷ್ಮಿ ಮೈಕ್ರೊ ಆ್ಯಂಟಿಕ್ ನೆಕ್ಲೇಸ್

ಚಿನ್ನದ ಗುಂಡುಗಳು, ಡೈಪೀಸ್, ಎರಕ ಹೊಯ್ದು ಮಾಡಿದ ವಿನ್ಯಾಸದ ಪೆಂಡೆಂಟ್ ಇವೆಲ್ಲಾ ಇದ್ದು ಗುಂಡು ಸರಿಗೆಯಿಂದ ಹೆಣೆದು ಮಾಡಿರುವ ನೆಕ್ಲೇಸ್ ಜನಪ್ರಿಯವೂ ಆಗಿದೆ. ಈ ಆಭರಣದಲ್ಲಿ ಲಕ್ಷ್ಮೀ ದೇವಿಯ ಗಾತ್ರ 9 ಮಿಮೀ ಅಗಲ 14ಮಿಮೀ ಉದ್ದದಲ್ಲಿ ತಯಾರಿಸಲಾಗುತ್ತದೆ. ಇದರಲ್ಲಿ ಲಕ್ಷ್ಮಿಯು ಅಭಯಹಸ್ತ ನೀಡುವ ಚಿತ್ರಣ ಇರುವುದು ವಿಶೇಷ. ಅಲ್ಲದೆ ಕೇವಲ 1.4 ಮಿಮೀ ಅಂದರೆ ಒಂದು ಸಾಸಿವೆ ಕಾಳಿನ ಗಾತ್ರದಲ್ಲಿ ವಿನ್ಯಾಸಗಾರ ಅಭಯ ಹಸ್ತವನ್ನು ಚಿತ್ರಿಸಿದ್ದಾನೆ. ಈ ಹಸ್ತದಲ್ಲಿ 5 ಬೆರಳುಗಳು ಜೊತೆಯಲ್ಲಿ ಚಿನ್ಮುದ್ರೆಯನ್ನು ಸುಂದರವಾಗಿ ಕೆತ್ತಲಾಗಿದೆ. ಹಾಗೆಯೇ ಕೈಯಲ್ಲಿ ಹಿಡಿದ ಕಮಲದ ಹೂವು, ಹೂವಿನ 6 ಎಸಳುಗಳು ಮತ್ತು ಮೊಗ್ಗು ಇದು ಕೇವಲ 2 ಮಿಮೀ ಅಂದರೆ ಒಂದು ಮೆಂತೆಯ ಕಾಳಿನಷ್ಟು ಗಾತ್ರ ಇದೆ ಅಷ್ಟೆ.

ಪೆಂಡೆಂಟ್‌ನ ಅಲಂಕಾರಕ್ಕೆ 2 ಮಿಮೀ ಗ್ರ್ಯಾನ್ವಲ್ಸ್ (ವ್ಯಾಕ್ಸ್ ಹೊಂದಿರುವ ಚಿನ್ನದ ಬೀಡ್ಸ್) ಒಳಗಡೆ ಟೊಳ್ಳು ಆಗಿದ್ದು ಒಂದು ಬದಿಯಿಂದ ಇನ್ನೊಂದು ಬದಿಗೆ ಬೆಳಕು ಹಾದು ಹೋಗುವ ರೀತಿಯಲ್ಲಿ ಕುಸುರಿ ಕೆಲಸ ಮಾಡಲಾಗಿದೆ. ಅದೇ ರೀತಿ ಲಕ್ಷ್ಮಿಯ ಸುತ್ತಲೂ ಮಾಡಿದ ವಿನ್ಯಾಸ ಕೂದಲುಗಳ ಎಳೆಯಂತೆ ಇದೆ. ದೇವಿಯ ಹಾರ, ಹಾರದಲ್ಲಿರುವ ಪದಕ, ಸೂಕ್ಷ್ಮವಾದ ಕಿವಿ, ಕಿವಿಯಲ್ಲಿರುವ ಜುಮ್ಕಾ ಕೂಡ ಕಾಣಬಹುದು.

## ಕೊಳಲನೂದುವ ಕೃಷ್ಣ ನೆಕ್ಲೇಸ್

ಎಲ್ಲಾ ನೆಕ್ಲೇಸ್‌ಗಳಂತೆ ರೂಬಿ, ಹರಳು ಚಿನ್ನದ ಗುಂಡುಗಳು, ಪಕ್ಷಿ, ಹೂವಿನ ಚಿತ್ರಣದ ಜೊತೆಗೆ ಕಣ್ಮನ ಸೆಳೆಯುವ ಗೋಪಾಲಕೃಷ್ಣ ಅತ್ಯದ್ಭುತವಾಗಿ ಮೈಕ್ರೊ ಆ್ಯಂಟಿಕ್‌ನಲ್ಲಿ ವಿನ್ಯಾಸಗೊಳಿಸಲಾಗಿದೆ. 18 ಮಿಮೀ ಎತ್ತರ, 13 ಮಿಮೀ ಅಗಲ ಬಿಂಬದಲ್ಲಿ ಗೋವನ್ನು ಕಾಣಬಹುದು. ಗೋವಿನ ಮುಖ 2 ಮಿಮೀ ಇದ್ದು, ಗೋವಿನ ಕಾಲುಗಳು, ಕಾಲಿನ ಗೊರಸುಗಳು, ಕೆಚ್ಚಲು, ಕೃಷ್ಣನ ಕೊಳಲು, ಕೊಳಲಿನಲ್ಲಿರುವ ರಂಧ್ರಗಳು, ಕೃಷ್ಣನ ಪಂಚೆಯ ನೆರಿಗೆಗಳು, ಮುಖದ ಮೇಲಿರು ವಿಷ್ಣುನಾಮ ಕಿರೀಟದಲ್ಲಿ ನವಿಲುಗರಿ... ಹೀಗೆ ಸುಂದರವಾದ ಎಲ್ಲಾ ಅತೀ ಸೂಕ್ಷ್ಮ ಕೆಲಸಗಳನ್ನು ವಿನ್ಯಾಸಗಾರ ಚಿತ್ರಿಸಿರುವುದು ವಿಶೇಷ.

## ಗಣೇಶ ಚಿತ್ರಣದ ನೆಕ್ಲೇಸ್

ಗಣೇಶನನ್ನು ಭಜಿಸದವರಿಲ್ಲ. ವಿಘ್ನ ವಿನಾಶಕ, ಗಣನಾಯಕ ಸಕಲ ಐಶ್ವರ್ಯ ನೀಡುವವ ಮೈಕ್ರೊ ಆ್ಯಂಟಿಕ್ ಗಣಪತಿ ಬಿಂಬದಲ್ಲಿ ಗಣಪತಿಯ ಚಿತ್ರಣ ಕೇವಲ ನೆಲಕಡಲೆಯ ಬೀಜದ ಗಾತ್ರವನ್ನು ಕೈಯಲ್ಲಿ ಪಾಶಂಕುಶ, ಅಭಯ ಹಸ್ತ. ಇನ್ನೊಂದು ಕೈಯಲ್ಲಿ ಲಡ್ಡು ಇವೆಲ್ಲಾ ಸಾಸಿವೆ ಕಾಳಿನಷ್ಟು ಗಾತ್ರ ಹೊಂದಿದೆ. ಹೊಟ್ಟೆಗೆ ಸುತ್ತಿದ ಹಾವು ಕಿವಿ, ಸೊಂಡಿಲು, ತುಂಡಾದ ದಂತವೂ ಬಹಳ ಸೂಕ್ಷ್ಮವಾಗಿ ಇವೆ. ಅದ್ಭುತವೇ ಸರಿ.

## ರಾಮ ಸೀತೆಯ ವಿವಾಹ ಚಿತ್ರಣ

ರಾಮ ಸೀತೆಯ ಉಡುಗೆ ತೊಡುಗೆಗಳು ಮತ್ತು ಸೀರೆಯ ನೆರಿಗೆ, ಸೆರಗು ಪೇಟ, ತೊಟ್ಟ ಬಟ್ಟೆಯ ಮೇಲಿನ ಚಿತ್ರಣಗಳು ಕೈಯಲ್ಲಿರುವ ಹಾರ ಅಷ್ಟೂ ಗೋಚರವಾಗುವುದು. ಕೇವಲ 5 ಮಿಮೀ ಅಳತೆಯಲ್ಲಿ ಇದಕ್ಕೆ ಇನ್ನೂ ವೈಭವವನ್ನು ಹೆಚ್ಚಿಸುವ ನೃತ್ಯಭಂಗಿಯಲ್ಲಿರುವ ನಾಟ್ಯ ಮಯೂರಿಯರ ಚಿತ್ರಣ. ಕೇವಲ 14 ಮಿಮೀ ಗಾತ್ರದಲ್ಲಿದ್ದು ಭರತನಾಟ್ಯದ ಭಂಗಿ ಬಹಳ ಸುಂದರವಾಗಿದೆ. ಕೈಯ ಬಳೆಗಳು, ಕೈಯ ಮುದ್ರೆಗಳು, ತಲೆಯ ಸೂಡಿ, ತೊಟ್ಟಿರುವ ಕೇರಳಾಭರಣ ಕೂಡ ಕಣ್ಣಿಗೆ ವಿನ್ಯಾಸದೊಂದಿಗೆ ಕಾಣುವಂತೆ ಚಿತ್ರಿಸಲಾಗಿದೆ.

ಇಂದಿನ ಈ ಅದ್ಭುತ ವಿನ್ಯಾಸಗಳ ಆಭರಣ ಜನಮನದ ಪ್ರೀತಿಗೆ ಪಾತ್ರವಾಗಿದೆ. ಇಂತದ್ದೇ ಬೇಕು ಎಂದರೆ ಅಂತಹದ್ದನ್ನು ಮಾಡುವಷ್ಟು ಕೌಶಲ್ಯ ಹೊಂದಿದ ಕಲಾಗಾರರು ಇದ್ದಾರೆ. ಯಂತ್ರಗಳೂ ಆ ತರದಲ್ಲಿ ಮಾಡುವಲ್ಲಿ ಸಹಕಾರ ನೀಡುತ್ತವೆ. ■